ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

ಒದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮಾದರಿ ಜಿಲ್ಲಾಧಿಕಾರಿ

ಐಎಎಸ್ ಅಥವಾ ಐಪಿಎಸ್ ಅಧಿಕಾರಿಗಳು ತಮ್ಮ ಮಕ್ಕಳನ್ನು ಪ್ರತಿಷ್ಠಿತ ನರ್ಸರಿ ಶಾಲೆಗಳಿಗೆ ದಾಖಲಿಸುವುದು ಸಾಮಾನ್ಯ. ಆದರೆ, ತಿರುನೆಲ್ವೆಲಿ ಜಿಲ್ಲಾಧಿಕಾರಿ ಶಿಲ್ಪಾ ಪ್ರಭಾಕರ ಸತೀಶ ಅವರು ಭಿನ್ನವಾಗಿ ನಿಲ್ಲುತ್ತಾರೆ. ಇವರು ತಮ್ಮ ಪುತ್ರಿಯನ್ನು ಜಿಲ್ಲಾಧಿಕಾರಿ ಕಚೇರಿಗೆ ಸಮೀಪವಿರುವ ಅಂಗನವಾಡಿಯೊಂದಕ್ಕೆ ದಾಖಲಿಸಿದ್ದಾರೆ. ಕರ್ನಾಟಕ ಮೂಲದವರಾದ ಇವರ ಈ ಕಾರ್ಯಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಸಮಾಜದ ಎಲ್ಲ ವರ್ಗಗಳ ಮಕ್ಕಳೊಂದಿಗೆ ಒಡನಾಡಬೇಕು. ಅವರೊಂದಿಗೆ ಬದುಕುವುದನ್ನು ಕಲಿಯಬೇಕು ಎಂಬ ಬಯಕೆಯಿಂದ ಪುತ್ರಿಯನ್ನು ಅಂಗನವಾಡಿಗೆ ದಾಖಲಿಸಿದ್ದಾಗಿ ಶಿಲ್ಪಾ ಸ್ಪಷ್ಟಪಡಿಸಿದ್ದಾರೆ. ಅಂಗನವಾಡಿಗೆ ಹೋಗಲಾರಂಭಿಸಿದ ಬಳಿಕ ಆಕೆಯ ತಮಿಳು ಭಾಷಾಜ್ಞಾನ ಮತ್ತು ಗ್ರಹಿಕೆ ಉತ್ತಮಗೊಂಡಿರುವುದಾಗಿ ಹೇಳಿದ್ದಾರೆ. ಅಂಗನವಾಡಿ ಎಂದರೆ ಬಡವರು, ನಿರ್ಗತಿಕರ ಮಕ್ಕಳ ಶಾಲೆ ಎಂದು ಭಾವಿಸಿರುವ ಈ ಕಾಲಘಟ್ಟದಲ್ಲಿ ಜಿಲ್ಲಾಧಿಕಾರಿಯೊಬ್ಬರು ತಮ್ಮ ಮಗಳನ್ನು ಅಲ್ಲಿಗೆ ಸೇರಿಸಿ ಮಾದರಿಯಾಗಿರುವುದು ಸಂತಸದ ಸಂಗತಿ.

-ಶಂಕರಗೌಡ ಬಿರಾದಾರ ಮುಳಸಾವಳಗಿ

ಹಿಂದೂ ಧರ್ಮ ರಕ್ಷಿಸಿ

ಇಂದು ಅನೇಕ ಕಡೆಗಳಲ್ಲಿ ಹಿಂದೂಗಳ ಧಾರ್ಮಿಕ ಶ್ರದ್ಧಾ ಕೇಂದ್ರಗಳನ್ನು ಗುರಿಯಾಗಿರಿಸಿಕೊಂಡು ಸಮಾನತೆಯ ಹೆಸರಲ್ಲಿ ಹಿಂದು ಧರ್ಮದ ಸಂಸ್ಕೃತಿ, ಆಚಾರ-ವಿಚಾರಗಳನ್ನು ನಾಶ ಮಾಡುವ ಹುನ್ನಾರ ನಡೆಯುತ್ತಿದೆ. ಇದಕ್ಕೆ ಮೂಲ ಕಾರಣ ಹಿಂದೂಗಳಲ್ಲಿ ಐಕ್ಯತೆ ಇಲ್ಲದಿರುವುದು ಮತ್ತು ಹಿಂದೂ ಧರ್ಮದ ಮೇಲೆ ಶ್ರದ್ಧೆ ಇಲ್ಲದಿರುವುದು. ಹಿಂದೂ ಧರ್ಮವನ್ನು ಉಳಿಸುವಂತಹ ಕಾರ್ಯ ಹಿಂದೂಗಳಿಂದ ಆಗುತ್ತಿಲ್ಲ. ಬದಲಾಗಿ ಧರ್ಮದ ಬಗೆಗಿನ ನಿರ್ಲಕ್ಷ್ಯ ಭಾವ ಹೆಚ್ಚಾಗುತ್ತಿದೆ. ಇದಕ್ಕೆ ಮೂಲ ಕಾರಣ ಧರ್ಮಶಿಕ್ಷಣ ಇಲ್ಲದಿರುವುದು. ಒಂದು ಕಡೆ ಜಾತ್ಯತೀತ ಅಂತ ಹೇಳಿಕೊಳ್ಳುವ ಸರಕಾರ ಇನ್ನೊಂದು ಕಡೆ ಆಮಿಷದ ಮತಾಂತರ ನಡೆಯುತ್ತಿದ್ದರೆ ಯಾವುದೇ ಕ್ರಮ ಕೈಗೊಳ್ಳದೇ ಕಣ್ಣುಮುಚ್ಚಿ ಕುಳಿತಿದೆ. ನಮ್ಮಲ್ಲಿನ ದೋಷಗಳನ್ನೇ ಸರಿಯಾಗಿ ಬಳಸಿಕೊಂಡು ಹಿಂದೂಗಳಿಂದಲೇ ಹಿಂದೂ ಧರ್ಮವನ್ನು ನಾಶಮಾಡವಲ್ಲಿ ಅನ್ಯ ಧರ್ಮಗಳು ಸಫಲವಾಗುತ್ತಿವೆ.

- ಪ್ರಕಾಶ್ ಸಂತೆಕಟ್ಟೆ ಉಡುಪಿ

ಬಡವರಿಗೆ ಮೀಸಲು ಸಿಗಲಿ

ಮೇಲ್ವರ್ಗದ ಜಾತಿಯ, ಆರ್ಥಿಕವಾಗಿ ಹಿಂದುಳಿದವರಿಗೆ ಸರಕಾರಿ ನೌಕರಿ ಮತ್ತು ವಿದ್ಯಾಭ್ಯಾಸದಲ್ಲಿ ಶೇ.10% ಮೀಸಲು ನೀಡುವುದಾಗಿ ಮೋದಿ ನೇತೃತ್ವದ ಕೇಂದ್ರ ಸರಕಾರದ ನಿರ್ಧಾರ ಸ್ವಾಗತಾರ್ಹ. ಆದರೆ ಕೇವಲ ಮೀಸಲಾತಿ ಕೊಟ್ಟರೆ ಸಾಲದು. ಒಂದು ಸಮೀಕ್ಷೆ ಮಾಡಿ ಫಲಾನುಭವಿಗಳು ಯಾರು, ಅವರ ಆರ್ಥಿಕ ಸ್ಥಿತಿ ಏನು? ಮುಂತಾದ ಮಾಹಿತಿಯನ್ನೊಳಗೊಂಡ ವರದಿಯನ್ನು ಆಗಾಗ ಪರಿಶೀಲಿಸುವಂಥ ವ್ಯವಸ್ಥೆಯಾದಾಗ ಅದರ ಸದ್ಬಳಕೆಯಾಗುತ್ತದೆ. ಇಂದಿಗೂ ಮೀಸಲಾತಿಯನ್ನು ಪಡೆದಿದ್ದರೂ, ದಲಿತರು, ಶೋಷಿತರ ಸಮುದಾಯವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಇನ್ನೂ ಮುಂಚೂಣಿಗೆ ಬಂದಿಲ್ಲ. ಹಿಂದಿನ ಸರಕಾರಗಳು ಮೀಸಲಾತಿಯನ್ನು ಕೇವಲ ಮತದಾರರ ಮತವನ್ನು ಸೆಳೆಯುವ ಗಾಳವಾಗಿಸಿಕೊಂಡಿದ್ದವು. ಈ ಮೀಸಲಾತಿಯ ಲಾಭವನ್ನು ಕೆಲವೇ ಕೆಲವು ಪ್ರಬಲ ದಲಿತರು ಪಡೆಯುತ್ತಿದ್ದಾರೆ. ಆದರೆ ಬಡ ದಲಿತರು ಇನ್ನೂ ಬಡವರಾಗಿಯೇ ಉಳಿದಿದ್ದಾರೆ. ಅಂಬೇಡ್ಕರ್ ಅವರ ಆಶಯದಂತೆ ಆ ಸಮುದಾಯವು ವಿದ್ಯಾವಂತ ಸಮುದಾಯವಾಗಬೇಕು. ಸಮಾಜದ ಮುಂಚೂಣಿಗೆ ಬರುವಂತಾಗಬೇಕು. ಹಾಗೆಯೇ ಎಲ್ಲ ಸಮುದಾಯದ ಆರ್ಥಿಕವಾಗಿ ಹಿಂದುಳಿದವರು ಉತ್ತಮಸ್ಥಿತಿಗೆ ಬರುವಂತಾಗಬೇಕು.

-ಶ್ರೀರಂಗ ಪುರಾಣಿಕ ವಿಜಯಪುರ

ಭಟ್ಟರ್ ಸ್ಕಾಚ್

- **ಬರಗಿ ಚಂದ್ರಕಾಂತ,** ತುಮಕೂರು

ಕಾಣದ ದೇವರಿಗೆ ಕೈ ಮುಗಿಯುವುದು ಸರಿಯಲ್ಲ ಎಂದು ಕೋರ್ಟಿಗೆ ಹೋದರೆ ಏನು ಮಾಡುವುದು?

- ಭಕ್ತರಿಂದ ಕಾಣಿಕೆ ಪಡೆದು ಅವರ ಕೆಲಸ ಮಾಡಿಕೊಟ್ಟಿಲ್ಲ ಎಂದು ದೇವರ ವಿರುದ್ಧವೇ ಕೇಸು ಹಾಕಬಹುದು!

- **ರಾಮನಾಥ್ ಹಣಗಿ,** ಬೆಂಗಳೂರು

ಭಟ್ರೇ, ಪ್ರೀತಿಯಲ್ಲಿ ಎಷ್ಟು ಮುಖ?

- ಸರಿಯಾಗಿ ಪ್ರಶ್ನೆಯನ್ನು ಕೇಳು, ಮುಖವಾಡವಿಲ್ಲದೆ ಪ್ರೀತಿ ಇದೆಯೇ ಅಂತ?!

- **ಕೆ.ಪಿ.ರಮೇಶ,** ಗಿರಿನಗರ

ಹೆಂಡತಿಯನ್ನು ಆರಿಸುವಾಗ ಗಂಡಸರು ಯಾವ ಮಾನದಂಡವನ್ನು ಉಪಯೋಗಿಸುತ್ತಾರೆ?

- ಸಮಸ್ಯೆ ಅಂದ್ರೆ ಆ ಸಮಯದಲ್ಲಿ ಮಾನ ಹಾಗೂ ದಂಡ ಎರಡೂ ಬೇರೆ ಬೇರೆ ಪದಗಳು ಎಂದು ಭಾವಿಸಿರುತ್ತಾರೆ!

- **ಸಂಗೀತ ಹೆಗಡೆ,** ಶಿರಸಿ

ಮೂವತ್ತೈದು ಅಂಕ ಪಡೆದವರು ಒಳ್ಳೆಯ ವಿದ್ಯಾರ್ಥಿಗಳಲ್ವಾ, ಭಟ್ರೆ?

- ಜೀವನದಲ್ಲಿ ದಯೆ, ಅನುಕಂಪ ಮತ್ತು ಕರುಣೆ ಎಂಬ ಪದಗಳಿಗೆ ಅರ್ಥವನ್ನು ಕೊಟ್ಟವರೇ ಇವರು!

- **ವಿರೂಪಾಕ್ಷ ಗಂಟವಾಳ,** ಹುಬ್ಬಳ್ಳಿ

ಧೈರ್ಯಶಾಲಿಗಳಾದವರು ಎತ್ತರದ ದನಿಯಲ್ಲಿ ಕಿರುಚುತ್ತಾರಂತೆ, ನಿಜವಾ ಭಟ್ರೇ?

- ಹಾಗಂತ ಅವರು ಭಾವಿಸಿರುತ್ತಾರೆ!

- **ಈರಯ್ಯ ಪಾಟೀಲ,** ಕಮಡೊಳ್ಳಿ

ದಿನವೂ ಈ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಹೊಡೆದಾಡುತ್ತಾರಲ್ಲ?

- ದೋಸ್ತಿಗಳಲ್ಲವಾ?!

- **ಪರಮೇಶ್ವರ ಶರ್ಮ,** ಹೊನ್ನಾವರ

ಜೀವನದಲ್ಲಿ ಯಾವುದಕ್ಕೆ ಮಹತ್ವ ಕೊಡಬೇಕೆಂಬುದೇ ತಿಳಿಯುತ್ತಿಲ್ಲವಲ್ಲ?

- ಅದು ತಿಳಿಯದಿದ್ದರೆ, ಈಗ ಹೇಗಿದ್ದೀಯೋ ಹಾಗೇ ಇದ್ದುಬಿಡು!

- **ನಾರಾಯಣ ಆಚಾರ್ಯ,** ಬೆಂಗಳೂರು

ಹೆಂಡತಿ ಹೇಳಿದಂತೆ ಕೇಳಿದರೆ ಹೀಯಾಳಿಸುತ್ತಾರಲ್ಲ, ಯಾಕೆ ಸಾರ್?

- ಅದು ಯಾರ ಹೆಂಡತಿ ಹೇಳಿದಂತೆ ಎಂಬುದನ್ನು ಆಧರಿಸಿರುತ್ತದೆ, ಆಚಾರ್ಯರೇ!

- **ಕಾವೇರಿ ನಂಜುಂಡಪ್ಪ,** ಸಹಕಾರನಗರ

ವಿದೂಷಕರೆನಿಸಿಕೊಂಡವರು ಕಿರುಚಿದ್ದನ್ನು ಎಂದಾದರೂ ನೋಡಿದ್ದೀರಾ?

- ಅದೇ ರೀತಿ ಡಾನ್ ಎಂದು ಕರೆಯಿಸಿಕೊಂಡವರು ಕಿರುಚಿದ್ದನ್ನು ನೋಡಿದ್ದೀರಾ?

- **ಬನಹಟ್ಟಿ ರವಿ,** ಗದಗ

ಭಟ್ರೇ, ದೇವತಾ ಮನುಷ್ಯ ಅಂದ್ರೆ ಯಾರು?

- ಇದ್ದೂ ಇಲ್ಲ ಎಂಬ ಭಾವನೆ ಮೂಡಿಸಿರುವ ಶಂಭುಲಿಂಗ ಕುಚನೂರ!

ಯಶಸ್ಸಿಗೆ ಪ್ರೇರಣೆ ನೀಡಬೇಕಾದವರು ಪಾಲಕರಲ್ಲವೇ?

ಆಶಯ

ಸಿದ್ಧಾರ್ಥ ವಾಡೆನ್ನವರ ಎಂ ಡಿ ಸತೀಶ್ ಶುಗರ್ಸ್

editoped@vishwavani.news

ಮಕ್ಕಳಿಗೆ ಊಟ ನೀಡುವುದು, ಧರಿಸಲಿಕ್ಕೆ ಬಟ್ಟೆ ನೀಡುವುದು, ಮಲಗಲು ಆಶ್ರಯ ನೀಡುವುದು ಇವೇ ನಮ್ಮ ಜವಾಬ್ದಾರಿ ಎಂದು ಹಲವು ಪಾಲಕರು ತಿಳಿದುಕೊಂಡಿದ್ದಾರೆ, ಸಮಸ್ಯೆ ಇರುವುದು ಇಲ್ಲೇ. ಸರಕಾರದವರು ಕೂಡಾ 'ಖಾನಾ-ಕಪಡಾ-ಮಕಾನ್' ಯೋಜನೆ ಜಾರಿ ಮಾಡಿ ಕಳೆದ 71 ವರ್ಷಗಳಿಂದ ನಮಗೆ ಮೋಸ ಮಾಡುತ್ತಿದ್ದಾರೆ. ಚೆನ್ನಾಗಿ ಅಧ್ಯಯನ ಮಾಡಿದರೆ ಬುದ್ಧಿವಂತರಾಗುತ್ತೇವೆ, ಚೆನ್ನಾಗಿ ನಿದ್ರೆ ಮಾಡಿದರೆ ಮನಸ್ಸು ಪ್ರಶಾಂತವಾಗುತ್ತದೆ. ಬರುವ ಕೀರ್ತಿ ಸಾಧನೆ ಅದು ಸ್ವ-ಪ್ರಯತ್ನದಿಂದಲೇ ಈ ಸತ್ಯವನ್ನು ಮಕ್ಕಳಿಗೆ ತಿಳಿಸಬೇಕು.

ಒಳ್ಳೆಯದು-ಕೆಟ್ಟದ್ದು, ಸತ್ಯ-ಅಸತ್ಯ ಇವುಗಳ ಬಗ್ಗೆ ಆರನೇಯ ಇಂದ್ರಿಯಕ್ಕೆ ಮಾತ್ರ ಗೊತ್ತಿದೆ. ದೇಶದ ಶಿಕ್ಷಣ ವ್ಯವಸ್ಥೆ ತಾರತಮ್ಯದಿಂದ ಕೂಡಿದೆ. ಶಾಲೆಯಲ್ಲಿ ಒಂದೇ ರೀತಿಯಾದ ಅಧ್ಯಯನ ಇರುತ್ತದೆ. ಶಿಕ್ಷಕಿ ಅವಳೇ ಇರುತ್ತಾಳೆ, ಪರಿಸರ ಅದೇ ಇರುತ್ತದೆ, ಆಡಳಿತ ಮಂಡಳಿ ಭಿನ್ನವಾಗಿರುವುದಿಲ್ಲ, ಆದರೂ ಒಬ್ಬ ವಿದ್ಯಾರ್ಥಿ ಅತಿ ಹೆಚ್ಚು ಅಂಕಗಳನ್ನು ಪಡೆದರೆ, ಮತ್ತೊಬ್ಬ ವಿದ್ಯಾರ್ಥಿ ಅತಿ ಕಡಿಮೆ ಅಂಕಗಳನ್ನು ಪಡೆಯುತ್ತಾನೆ. ವಿದ್ಯಾರ್ಥಿಗಳು ಪಡೆಯುವ ಅಂಕಗಳ ಮಧ್ಯ ತುಂಬಾ ವ್ಯತ್ಯಾಸ ಇದೆ. ಮುಂದುವರೆದ ದೇಶಗಳಲ್ಲಿ ಈ ರೀತಿ ಇಲ್ಲ. ಮಕ್ಕಳ ಜೀವನದಲ್ಲಿ ಮುಖ್ಯ ಪಾತ್ರ ವಹಿಸುವವರು ಯಾರು? ಜನ್ಮ ನೀಡಿದವರಲ್ಲದೇ ಯಾರಿದ್ದಾರೆ? ನೀವೇ ಯೋಚಿಸಿ.

ನಮ್ಮ ದೇಶ ಶ್ರೀಮಂತ ದೇಶ, ಜಿಡಿಪಿಯಲ್ಲಿ ಜಗತ್ತಿನಲ್ಲಿ ಆರನೇ ಸ್ಥಾನವನ್ನು ಅಲಂಕರಿಸಿದೆ. ಆದರೂ ಶ್ರೀಮಂತ ಭಾರತ ದೇಶದಲ್ಲಿ ಬದುಕುತ್ತಿರುವವರು ಹೆಚ್ಚಾಗಿ ಶ್ರೀಮಂತರಲ್ಲ ಅವರು ಬಡವರು. ಇದನ್ನು ತಲಾ ಆದಾಯ ನೋಡಿ ತಿಳಿದುಕೊಳ್ಳಬೇಕು. ತಲಾ ಆದಾಯದಲ್ಲಿ ನಮ್ಮ ದೇಶ ಜಗತ್ತಿನಲ್ಲಿ 139ನೇ ಸ್ಥಾನದಲ್ಲಿದೆ. ಇದಕ್ಕೆ ಪ್ರಮುಖ ಕಾರಣ ಜನಸಂಖ್ಯಾ ಸ್ಫೋಟ. ದೇಶದಲ್ಲಿರುವ ಬಹುತೇಕ ಕುಟುಂಬಗಳು ಬಡತನದಿಂದ ಕೂಡಿವೆ ಈ ಕಟು ಸತ್ಯವನ್ನು ರಾಜಕೀಯ ಪಕ್ಷಗಳು ನಮಗೆ ತಿಳಿಸುವುದಿಲ್ಲ.

ನಿಜ ಹೇಳಬೇಕೆಂದರೆ ಪ್ರತಿ ಕುಟುಂಬಕ್ಕೆ ತೃಪ್ತಿದಾಯಕ ಆದಾಯವಿಲ್ಲ, ಪಾಲಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಬೀಡಿ, ಸಿಗರೇಟ, ಗುಟಖಾ, ಸರಾಯಿ, ಜೂಜಾಟ, ಇಸ್ಪೀಟ್ ಹೀಗೆ ಹಲವು ದುಶ್ಚಟಗಳ ದಾಸರಾಗಿದ್ದಾರೆ. ದೇಹಕ್ಕೆ ಹಾನಿಕಾರಕವಾಗಬಲ್ಲ ವಸ್ತುಗಳನ್ನು ಸರಬರಾಜು ಮಾಡಿ ಸರಕಾರಗಳು ಆದಾಯ ಸಂಗ್ರಹಿಸುತ್ತಿವೆ. ದುಶ್ಚಟಗಳ ದಾಸರಾಗಲು ಪ್ರಮುಖ ಕಾರಣ, ನಿರುದ್ಯೋಗ, ಜನಸಂಖ್ಯಾ ಸ್ಫೋಟ, ಶಾಶ್ವತ ಆದಾಯ ಇಲ್ಲದೇ ಇರುವುದು. ಮನೆಯಲ್ಲಿ ಪ್ರತಿದಿನ ಜಗಳ, ದುಶ್ಚಟಗಳನ್ನು ಮಕ್ಕಳ ಮುಂದೆಯೇ ಮಾಡುವುದು ನಮ್ಮ ದೇಶದಲ್ಲಿ ಸಾಮಾನ್ಯವಾಗಿದೆ. ಇದು ಸಹಜವಾಗಿ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತದೆ.

ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಜನ್ಮ ನೀಡಿದವರು ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ, ಆ ನಿಯಮಗಳೆಂದರೆ,

● ಜನ್ಮ ನೀಡಿದ ದಿನದಿಂದ ಮಗುವಿನ ದೇಹ ಪಕ್ವವಾಗುವವರೆಗೆ ಮತ್ತು ಮಗುವಿನ ಮಿದುಳು ಪಕ್ವವಾಗುವವರೆಗೆ, ಅಂದರೆ ಮನಸ್ಸಿಗೆ ಪಕ್ವತೆ ಬರುವವರೆಗೆ ಪಾಲಕರು ತಮ್ಮ ಅನುಭವದ ಅಮೃತವನ್ನು ಮಕ್ಕಳಿಗೆ ದಾರೆ ಎರೆಯಬೇಕು. ● ಅಂದಾಜು 20 ವರ್ಷಕ್ಕೆ ಮಗುವಿನ ದೇಹ ಮತ್ತು ಮನಸ್ಸಿಗೆ ಪರಿಪಕ್ವತೆ ಬರುತ್ತದೆ. 20 ವರ್ಷಗಳವರೆಗೆ ಮಗು ನಿಮ್ಮ ಉಸ್ತುವಾರಿಯಲ್ಲೇ ಬೆಳೆಯಬೇಕು. ಕುಟುಂಬದಲ್ಲಿನ ಕಲಹಗಳು, ವಯಸ್ಕರ ದುಶ್ಚಟಗಳು ಮಕ್ಕಳ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು. ● ಮಕ್ಕಳ ಜೊತೆ ಅನ್ಯೋನ್ಯ ಸಂಬಂಧ ಬೆಳೆಸಿಕೊಳ್ಳಬೇಕು, ದುಷ್ಟ ಜನರಿಂದ ದೂರ ಇರಬೇಕು, ಅಗತ್ಯವಿರುವವರೊಂದಿಗೆ ಮಾತ್ರ ಹೊಂದಾಣಿಕೆ ಮಾಡಿಕೊಳ್ಳಬೇಕು. ● ಪುರುಷರು ಮನೆಯಲ್ಲಿರುವ ಮಹಿಳೆಯರ ಮೇಲೆ ದಬ್ಬಾಳಿಕೆ ಮಾಡಬಾರದು.

ಮನೆಯಲ್ಲಿ ಬಳಸುವ ಭಾಷೆ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಪರಿವಾರದಲ್ಲಿ ಉಪಯೋಗಿಸುವ ಭಾಷೆ ಮೃದುವಾಗಿರಬೇಕು. ಯಾವುದೇ ಪರಿಸ್ಥಿತಿಯಲ್ಲಿ ಮಕ್ಕಳ ಮುಂದೆ ಟೆನ್ಷನ್ ಮಾಡಿಕೊಳ್ಳಬಾರದು. ಕನಿಷ್ಠವೆಂದರೂ ಪ್ರತಿ ದಿನ ಒಂದು ಘಂಟೆ ಮಕ್ಕಳ ಅಧ್ಯಯನಕ್ಕೋಸ್ಕರ ಮೀಸಲಿಡಬೇಕು. ಆ ಸಮಯದಲ್ಲಿ ಅಧ್ಯಯನ ಬಿಟ್ಟರೆ ನಿಮ್ಮ ಮನಸ್ಸು ಬೇರೆ ಕಾರ್ಯಗಳತ್ತ ಹೋಗಬಾರದು. ಬಡವ-ಶ್ರೀಮಂತ, ಮೇಲು-ಕೀಳು, ದೊಡ್ಡವರು-ಸಣ್ಣವರು ಮಾನವೀಯ ಮೌಲ್ಯಗಳು ಮತ್ತು ಸಮಾನತೆಯ ಬಗ್ಗೆ ಮಕ್ಕಳಿಗೆ ಆಗಾಗ ಪಾಠ ಮಾಡಬೇಕು. ನಿಮ್ಮ ಬೆಂಬಲ ಅತೀ ಮುಖ್ಯ. ಈ ವಿಷಯಗಳಲ್ಲಿ ನೀವು ತಾರತಮ್ಯ ಪ್ರದರ್ಶಿಸಬಾರದು. ಈ ಬಗ್ಗೆ ಮಕ್ಕಳಿಗೆ ತರಬೇತಿ ನೀಡಬೇಕು ಇಲ್ಲವೇ ತರಬೇತಿ ನೀಡುವ ಸ್ಥಳಗಳಿಗೆ ಕರೆದುಕೊಂಡು ಹೋಗಬೇಕು. ಹಣ ಸಂಪಾದಿಸುವುದೊಂದೇ ಅಂತಿಮವಲ್ಲ, ದಿನದ 24 ಘಂಟೆ ಉಲ್ಲಾಸದಿಂದ ಇರುವುದು ಅತಿ ಮುಖ್ಯ.

ಸಂಸ್ಕೃತಿ, ಭಾಷೆ, ದೇಶಪ್ರೇಮ ಈ ಅಂಶಗಳನ್ನು ಮಕ್ಕಳ ತಲೆಯಲ್ಲಿ ತುಂಬಬೇಕು. ಈಗ ಎಲ್ಲಿ ನೋಡಿದರೂ ವ್ಯಸನಿಗಳೇ, ವ್ಯಸನದಾರಿಗಳು ಬೀದಿ-ಬೀದಿಯಲ್ಲಿ ಸಿಗುತ್ತಾರೆ, ಎಲ್ಲವನ್ನು ಮಕ್ಕಳ ಮುಂದೆ ಬಚ್ಚಿಡದೇ ಅವುಗಳ ದುಷ್ಪರಿಣಾಮಗಳ ಬಗ್ಗೆ ತಿಳಿ ಹೇಳಬೇಕು, ಜ್ಞಾನವೃದ್ಧಿಗೆ ಇವೆಲ್ಲವುಗಳ ತಿಳಿವಳಿಕೆ ಅತಿ ಮುಖ್ಯ. ಯಶಸ್ವಿ ನಾಯಕರ ಜೀವನ ಚರಿತ್ರೆಗಳನ್ನು ಹೇಳಿಕೊಡಬೇಕು, ಕೆಟ್ಟ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳನ್ನು ಹೇಗೆ ಗುರುತಿಸುವುದು ಈ ಬಗ್ಗೆ ತರಬೇತಿ ನೀಡಬೇಕು.

ಇಪ್ಪತ್ತು ವರ್ಷಗಳವರೆಗೆ ಶಾಲೆಯೊಂದನ್ನು ಬಿಟ್ಟು ಒಬ್ಬಂಟಿಗರನ್ನಾಗಿ ಎಲ್ಲಿಯೂ ಕಳುಹಿಸಬೇಡಿ, ಜೊತೆಗೆ ನೀವೂ ಹೋಗುವುದನ್ನು ರೂಢಿಸಿಕೊಳ್ಳಿ. ಅವರ ಎಲ್ಲ ಬೇಡಿಕೆಗಳಿಗೆ ಸ್ಪಂದಿಸಲು ನೀವು ಜೊತೆಯಾಗಿಯೇ ಇರಬೇಕು. ಮಕ್ಕಳ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನಿಮ್ಮಿಂದಲೇ ಸಿಗುವಂತಾಗಲಿ. ಮಕ್ಕಳ ಪ್ರಶ್ನೆಗಳಿಗೆ ಉತ್ತರ ಗೆಳೆಯರಿಂದ, ಸುತ್ತಮುತ್ತಲಿರುವವರಿಂದ ಸಿಗಬಾರದು.

ಗಿಡ ಬೆಳೆಯಲು ಸದೃಢ ಬೇರುಗಳಿರಬೇಕು, ಹಾಗೆಯೇ ಮಗು ಬೆಳೆಯಲು ಒಳ್ಳೆಯ ತಂದೆ-ತಾಯಿಗಳಿರಬೇಕು. ಸಾಮಾನ್ಯ ಜ್ಞಾನ ಪೋಷಕರಿಂದ ಸಿಗುತ್ತಿದ್ದರೆ, ಮಗುವಿನ ಬೇರುಗಳು ತುಂಬಾ ಉದ್ದ ಬೆಳೆಯುತ್ತವೆ, ಮುಂದೆ ದೊಡ್ಡವರಾದಾಗ ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗುತ್ತಾರೆ.

ಜವಾಬ್ದಾರಿಯನ್ನು ನೀವು ಅರಿತರೆ ಅದು ಮಕ್ಕಳಿಗೂ ಬರುತ್ತದೆ. ಸಂಶೋಧನಾತ್ಮಕ ಚಿಂತನೆ, ಸುತ್ತಲಿರುವ ಸೃಷ್ಟಿಯ ಮೂಲ ಇವುಗಳ ಬಗ್ಗೆ ಪ್ರಥಮವಾಗಿ ಮಕ್ಕಳಿಗೆ ತಿಳಿಸುವ ವ್ಯವಸ್ಥೆ ಪಾಲಕರಿಂದ ಆಗಬೇಕು. ಬಟ್ಟೆ ತೊಳೆಯವದರಿಂದ - ಬಟ್ಟೆ ಧರಿಸಿಕೊಳ್ಳುವವರೆಗೆ, ಶಾಲೆಗೆ ಹೋಗುವುದರಿಂದ- ಮದುವೆ ಮಾಡಿಕೊಳ್ಳುವವರೆಗೆ ನಿಮ್ಮ ಜವಾಬ್ದಾರಿಯಲ್ಲಿ ವ್ಯತ್ಯಾಸವಾಗಬಾರದು. ಮಧ್ಯದಲ್ಲಿ ಅಡೆತಡೆ ಇರಬಾರದು.

'ಶಾಲೆ ಕಲಿಯುವುದು ನೌಕರಿಗೋಸ್ಕರ ಅಲ್ಲ ನೌಕರಿ ಕೊಡುವುದಕ್ಕೋಸ್ಕರ' ಹೀಗೆ ಹೇಳಿ ಮಕ್ಕಳು ಸಂಶೋಧನಾತ್ಮಕ ಚಿಂತನೆಗೊಳಗಾಗುವಂತೆ ಮಾಡಬೇಕು. ರಾಜಕೀಯ, ಅಧ್ಯಾತ್ಮ, ಧಾರ್ಮಿಕ, ಉದ್ಯಮ, ಸೇವಾಕ್ಷೇತ್ರ ಹೀಗೆ ಹಲವು ಕ್ಷೇತ್ರಗಳಿವೆ. ಯಾವುದಾದರೊಂದು ಕ್ಷೇತ್ರದಲ್ಲಿ ನೀನು ನಾಯಕನಾಗಬೇಕಿದೆ, ಈ ಅರಿವು ಮತ್ತು ಜ್ಞಾನ ಮಕ್ಕಳಲ್ಲಿ ಮೂಡಿಸಬೇಕು. ಆಯಾ ಕ್ಷೇತ್ರಗಳಲ್ಲಿ ಯಶಸ್ವಿಯಾದ ನಾಯಕರ ಜೀವನ ಚರಿತ್ರೆಗಳನ್ನು ಅಧ್ಯಯನ ಮಾಡಲೇಬೇಕು. ಮಕ್ಕಳಿಗೆ ನೀಡುವ ಸಮಯ ಅದು ನಿಮ್ಮ ಸ್ವಾರ್ಥಗೋಸ್ಕರ ಉಪಯೋಗ ಆಗಬಾರದು. ಆ ನಿಮ್ಮ ಸಮಯ ಮಗುವಿನ ಭವಿಷ್ಯಕ್ಕೋಸ್ಕರ ಉಪಯೋಗ ಆಗಬೇಕು. ಮಕ್ಕಳಿಗೋಸ್ಕರ ಸಮಯ ಮೀಸಲಿಡಬೇಕು. ನಿಮ್ಮ ಸಮಯ ಮಕ್ಕಳ ಜ್ಞಾನಾಭಿವೃದ್ಧಿಗೆ ಅನುವು ಮಾಡಿಕೊಡುತ್ತಿರಬೇಕು.

ಪ್ರತಿದಿನ ಸಿಗರೇಟ ಸೇದುವುದು, ಸಾರಾಯಿ ಕುಡಿಯುವುದು, ಕುಟುಂಬದವರ ಜೊತೆಗೆ ಹೊಂದಾಣಿಕೆ ಇಲ್ಲದೇ ಇರುವುದು, ಜನ್ಮ ನೀಡಿದ ತಂದೆ-ತಾಯಿಗಳಿಗೆ ಮಾನ್ಯತೆ ಕೊಡದೇ ಇರುವುದು, ಜನ್ಮ ನೀಡಿದ ಮಕ್ಕಳ ಮೇಲೆ ಗಮನ ಹರಿಸದೇ ಇರುವುದು, ಮಕ್ಕಳು ಶಾಲೆಯಿಂದ ಮನೆಗೆ ಬಂದಾಗ ತಂದೆ ಹೊರಗೆ ಹೋಗುವುದು, ಮಕ್ಕಳು ಶಾಲೆಗೆ ಹೋದಾಗ ತಂದೆ ಮನೆಗೆ ಬರುವುದು ಈ ತರಹದ ರೂಢಿಗಳು ದೇಶದಲ್ಲಿ ಸಾಮಾನ್ಯವಾಗಿವೆ. ತಂದೆ ಅನ್ನುವವನಿಗೆ ಟೆನ್ಷನ್ ಬೇಡವಾಗಿದೆ. ಸಂಸಾರ ಮಾಡಲು ಹೆಂಡತಿ ಬೇಕು ಜೀವನ ನಡೆಸಲು ಜವಾಬ್ದಾರಿ ಬೇಕಾಗಿಲ್ಲ. ಮಕ್ಕಳ ಭವಿಷ್ಯವನ್ನು ಲೆಕ್ಕಿಸದೇ ದೇಹದ ಅಗತ್ಯಗಳೆಡೆಗೆ ಅವನ ಗಮನವಿರುತ್ತದೆ. ಮಕ್ಕಳ ಆರೈಕೆ ಮಾಡುತ್ತಲೇ ಇದ್ದರೆ ಎಂಜಾಯ್‌ಮೆಂಟ್ ಲೈಫ್ ಹಾಳಾಗುತ್ತದೆ, ಈ ನಂಬಿಕೆ ಹಲವು ಜನರಲ್ಲಿದೆ. ಯಾವುದೇ ಸಾಧನೆ ಮಾಡದೇ, ಟೆನ್ಷನ್‌ಗೆ ಒಳಗಾಗಿ ಮಕ್ಕಳನ್ನು ನಿರ್ಲಕ್ಷಿಸುತ್ತಿದ್ದಾರೆ.

ಕೆಲವು ಅನ್ವೇಷಣೆಗಳ ಪ್ರಕಾರ 18 ವರ್ಷಗಳವರೆಗೆ ಮಕ್ಕಳ ಬ್ರೇನ್ ಸಂಪೂರ್ಣವಾಗಿ ಬೆಳೆದಿರುವದಿಲ್ಲ. ಮಕ್ಕಳ ಬ್ರೇನ್ ಪಕ್ವವಾಗುವವರೆಗೆ ಅದರ ಉಸ್ತುವಾರಿಯನ್ನು ಜನ್ಮ ನೀಡಿದ ತಂದೆ ತಾಯಿಯೇ ನೋಡಿಕೊಳ್ಳಬೇಕಾಗುತ್ತದೆ. ಒಮ್ಮೆ ಜನ್ಮ ನೀಡಿದರೆ ಕನಿಷ್ಠ 20 ವರ್ಷಗಳವರೆಗೆ ಪಾಲನೆ-ಪೋಷಣೆ ಪಾಲಕರ ಜವಾಬ್ದಾರಿ. ಮಕ್ಕಳ ಭವಿಷ್ಯದ ಚಿಂತನೆ ಮತ್ತು ಉಸ್ತುವಾರಿ ಜನ್ಮ ನೀಡಿದವರಿಂದಲೇ ಆಗಬೇಕು. ಮಕ್ಕಳ ಸಮೃದ್ಧ ಬದುಕಿಗೆ ಇದು ಅಡಿಪಾಯ. 20 ವರ್ಷಗಳವರೆಗೆ ಮಕ್ಕಳ ಪಾಲನೆ-ಪೋಷಣೆಗೆ ಸಮಯ ನೀಡಿದರೆ ಅದೇ ಮಕ್ಕಳು 50 ವರ್ಷಗಳವರೆಗೆ ತಂದೆ-ತಾಯಿಯರ ಸೇವೆಯನ್ನು ಮಾಡುತ್ತಾರೆ.

ರಾಜಕೀಯದಲ್ಲಿ ನಾಯಕರಾಗಬೇಕಾದರೆ ಮಹಾತ್ಮಾ ಗಾಂಧೀ, ಮಾರ್ಟಿನ್ ಲೂಥರ್ ಕಿಂಗ್, ವ್ಯವಹಾರದಲ್ಲಿ ನಾಯಕರಾಗಬೇಕಾದರೆ ಅಂಡ್ರೀವ್ ಕಾರ್ನೆಜ್ - ಹೆನ್ರಿ ಫೂರ್ಡ್, ಧರ್ಮದಲ್ಲಿ ನಾಯಕರಾಗಬೇಕಾದರೆ ಭಗವಾನ ಮಹಾವೀರ - ಭಗವಾನ ಬುದ್ಧ, ಆಧ್ಯಾತ್ಮದಲ್ಲಿ ನಾಯಕರಾಗಬೇಕಾದರೆ ಸ್ವಾಮಿ ವಿವೇಕಾನಂದ - ಸದ್ಗುರು ಜಗ್ಗಿ ವಾಸುದೇವ ಇಂತಹ ಮಹಾನ್ ನಾಯಕರ ಜೀವನ ಚರಿತ್ರೆಗಳನ್ನು ಅಧ್ಯಯನ ಮಾಡಬೇಕು ಜೊತೆಗೆ ಮಕ್ಕಳಿಗೂ ಅಧ್ಯಯನ ಮಾಡಲು ಹೇಳಬೇಕು. ಆಸಕ್ತಿ ಇರುವ ಕ್ಷೇತ್ರಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಸಂಗ್ರಹಿಸಿದ ಮಾಹಿತಿಯನ್ನು ಮಕ್ಕಳಿಗೆ ಒದಗಿಸಬೇಕು.

ಬೆಳ್ಳಿ ಮೆರುಗಿನಲ್ಲಿ ಹರಡಿರುವ ಪ್ರಾಧಿಕಾರದ ಯೋಜನೆಗಳು

ಮಾತುಕತೆ

ಸುಧೀಂದ್ರ

editoped@vishwavani.news

ಕನ್ನಡ ಪುಸ್ತಕ ಪ್ರಾಧಿಕಾರ ಈ ವರ್ಷ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿತು. ಪುಸಕ ಪ್ರಾಧಿಕಾರದ ಮೊದಲ ಮಹಿಳಾ ಅಧ್ಯಕ್ಷರಾಗಿರುವ ಡಾ.ವಸುಂಧರ ಭೂಪತಿ ಇತ್ತೀಚೆಗೆ ಬೆಹರೇನ್‌ನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕುರಿತು ಹಾಗೆಯೇ ಪ್ರಾಧಿಕಾರದ ಮುಂದಿನ ಯೋಜನೆಗಳ ಕುರಿತು ಇಲ್ಲಿ ಮಾತನಾಡಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರ ಸ್ಥಾಪನೆಯಾಗಿದ್ದು: 1993ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಸ್ಥಾಪನೆಯಾಯಿತು, ಆಗಿನ ಮುಖ್ಯಮಂತ್ರಿಗಳಾಗಿದ್ದ ವೀರಪ್ಪ ಮೊಯಿಲಿ ಅವರು ಕೇರಳಕ್ಕೆ ಭೇಟಿಕೊಟ್ಟಾಗ ಅಲ್ಲಿ 'ರೈಟರ್ಸ್ ಗಿಲ್ಡ್' ಎಂಬ ಸಹಕಾರಿ ಸಂಘ ಲೇಖಕರ ಪುಸ್ತಕಗಳನ್ನು ಪ್ರಕಟಿಸುತ್ತಿತ್ತು, ಅದನ್ನು ಗಮನಿಸಿದ ವೀರಪ್ಪ ಮೊಯಿಲಿ ಅವರು ಪುಸ್ತಕ ಪ್ರಾಧಿಕಾರವನ್ನು ಆರಂಭಿಸಿದರು. ಹಿರಿಯ ವಿದ್ವಾಂಸರಾದ, ಪ್ರೊ.ಎಲ್. ಎಸ್. ಶೇಷಗಿರಿರಾಯರು ಮೊದಲ ಅಧ್ಯಕ್ಷರಾದರು.

ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ ಕುರಿತು: ಶೇ 50 ರ ರಿಯಾಯಿತಿ ಮಾರಾಟ ದರದಲ್ಲಿ ಪುಸ್ತಕ ಮಾರಾಟವನ್ನು ಪ್ರಾಧಿಕಾರದಿಂದ ಹಮ್ಮಿಕೊಳ್ಳಲಾಗಿದೆ. ಜನವರಿಯಲ್ಲಿ ಗಣರಾಜ್ಯೋತ್ಸವ, ಆಗಸ್ಟ್ ತಿಂಗಳಿನಲ್ಲಿ ಸ್ವಾತಂತ್ರ್ಯ ದಿನದ ಅಂಗವಾಗಿ ಹಾಗೆಯೇ ನವೆಂಬರ್ ನಲ್ಲಿ ರಾಜ್ಯೋತ್ಸವದ ಅಂಗವಾಗಿ ವಿಶೇಷ ರಿಯಾಯಿತಿ ದರದಲ್ಲಿ ಕನ್ನಡ ಪುಸ್ತಕಗಳ ಮಾರಾಟವನ್ನು ಪ್ರಾಧಿಕಾರ ಹಮ್ಮಿಕೊಂಡಿದೆ. ಈ ರಿಯಾಯಿತಿ ಮಾರಾಟಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದ್ದು. ಕನ್ನಡ ಓದುಗರು ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕಗಳನ್ನು ಖರೀದಿಸಿದರು. ರಿಯಾಯಿತಿ ಮೇಳದಲ್ಲಿ ಅತಿ ಹೆಚ್ಚು ಪುಸ್ತಕ ಖರೀದಿಸಿದ ಓದುಗರನ್ನು ಅಭಿನಂದಿಸಲಾಯಿತು.

ಆನ್ ಲೈನ್‌ನಲ್ಲಿ ಪುಸ್ತಕಗಳ ಮಾರಾಟ ನಡೆದದ್ದು: ಪ್ರಾಧಿಕರದ ವೆಬ್ ಸೈಟ್‌ಅನ್ನು ಪ್ರಸಕ್ತ ವಿದ್ಯಮಾನಕ್ಕೆ ತಕ್ಕಂತೆ ಉನ್ನತೀಕರಿಸಲಾಗಿದೆ. ಮತ್ತು ಸಾಮಾಜಿಕ ಜಾಲತಾಣಗಳನ್ನು ಪುಸ್ತಕಾಭಿರುಚಿಯನ್ನು ಹೆಚ್ಚಿಸಲು ಬಳಕೆ ಮಾಡಿಕೊಳ್ಳಲು ಕಾಲಮಾನಕ್ಕೆ ತಕ್ಕಂತೆ ಪರಿಷ್ಕರಿಸಿ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗಿದೆ. ಪ್ರಾಧಿಕಾರ ಪ್ರಕಟಿತ ಪುಸ್ತಕಗಳನ್ನು ಆನ್ ಲೈನ್ ಮೂಲಕ ಆಸಕ್ತರಿಗೆ ತಲುಪಿಸುವ ಅಗತ್ಯವಿರುವಂತೆ ಸಿರಿಗನ್ನಡ ಮಾರಾಟ ಮಳಿಗೆಯ ತಂತ್ರಜ್ಞಾನವನ್ನು ಪರಿಷ್ಕರಿಸಲಾಗಿದೆ, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು , ಪುಸ್ತಕಗಳ ಮಾರಾಟ ಆನ್ ಲೈನ್ ಮೂಲಕ ಸಾರ್ವಜನಿಕರು ಈಗಾಗಲೇ ಖರೀದಿಸುತ್ತಿದ್ದಾರೆ.

ವೆಬ್ ಸೈಟ್ ನಲ್ಲಿ ಎಲ್ಲಾ ಪುಸ್ತಕಗಳ ಸಂಕ್ಷಿಪ್ತ ಮಾಹಿತಿಯನ್ನು ಮುದ್ರಿಸಲಾಗಿದೆ. ಮನೆಯಲ್ಲೇ ಕುಳಿತು ಬುಕ್ ಮಾಡಬಹುದಾಗಿದೆ. ಅವರ ಮನೆಬಾಗಿಲಿಗೆ ಪುಸ್ತಕ ತಲುಪಿಸುವ ಸೇವೆ ನೀಡಲಾಗಿದೆ.

ನಿಮ್ಮ ಆಡಳಿತ ಅವಧಿಯಲ್ಲಿ ಪ್ರಾರಂಭವಾದ ಕೆಲಸಗಳು: 'ಲೋಕ ಕಾಣದ ಲೋಕ' ಎಂಬ ಮಹಿಳೆಯರ ಕಮ್ಮಟ. ಬೇರೆ ಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರನ್ನು ಒಗ್ಗೂಡಿಸಿ, ಒಂದು ಕಮ್ಮಟವನ್ನು ಏರ್ಪಡಿಸಿ, ಅವರ ಸಮಸ್ಯೆಯನ್ನು ಕುರಿತಾದ ವಿಚಾರ ಸಂಕಿರಣ, ಸಂವಾದ ಅಥವ ಒಂದು ಲೇಖನವನ್ನು ಬರೆಯಿಸಿ, ಆ ಕಮ್ಮಟದಲ್ಲಿ ಬೆಳಕಿಗೆ ಬಂದ ವಿಚಾರವನ್ನು ಪುಸ್ತಕ ರೂಪದಲ್ಲಿ ಹೊರತರುವ ಯೋಜನೆ ನಡೆಯುತ್ತಿದೆ.

ಹೈಸ್ಕೂಲ್ ವಿದ್ಯಾರ್ಥಿಗಳಿಗೆ 'ಅಚ್ಚು ಮೆಚ್ಚಿನ ಪುಸ್ತಕ' ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ಅವರ ನೆಚ್ಚಿನ ಪುಸ್ತಕ ಕುರಿತು ಚರ್ಚೆಯನ್ನು ಏರ್ಪಡಿಸುವ ಮೂಲಕ ಅವರ ಪುಸ್ತಕಾಭಿರುಚಿಯನ್ನು ಹೆಚ್ಚಿಸಲು ಕೆಲಸ ಅರಂಭವಾಗಿದೆ. ಅಲ್ಲದೇ 'ಜಾಣ ಜಾಣೆ'ಯರ ಬಳಗ ಯೋಜನೆ ಮೂಲಕ ಕಾಲೇಜಿನಿಂದ ಕಾಲೇಜಿಗೆ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ, ಬಹುಮಾನ ವಿತರಿಸುವ ಮೂಲಕ ಪುಸ್ತಕಾಭಿರುಚಿಯನ್ನು ಹೆಚ್ಚಿಸಲಾಗುತ್ತದೆ. ಈಗಾಗಲೇ ಈ ಎರಡು ಯೋಜನೆಗಳು ಕಾರ್ಯರೂಪದಲ್ಲಿದ್ದು, ವಿದ್ಯಾರ್ಥಿಗಳಿಂದ ಮೆಚ್ಚುಗೆಗೆ ಪಾತ್ರವಾಗಿದೆ. ಕಾಲೇಜು ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಪ್ರಾಧಿಕಾರದ ಇನ್ನಿತರ ಯೋಜನೆಗಳು: ಕರಡಚ್ಚು ಶಿಬಿರ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳ ಸ್ಥಾಪಿಸಿ, ಯುವ ಬರಹಗಾರರ ಚೊಚ್ಚಲ ಕೃತಿಗೆ 15000 ರು. ಪ್ರೋತ್ಸಾಹ ಧನ ನೀಡಲಾಗುತ್ತದೆ. ಇದನ್ನು 30 ರಿಂದ 50 ಜನರಿಗೆ ಹೆಚ್ಚಿಸಲಾಗಿದೆ. ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಸಾಹಿತಿಗಳ ಕೃತಿಗೆ 35000 ಪ್ರೋತ್ಸಾಹ ಧನವನ್ನು ನೀಡಲಾಗುವುದು, ಮುದ್ರಕರಿಗೆ ಮುದ್ರಣ ಸೊಗಸು ಬಹುಮಾನವನ್ನು ಆರಂಭಿಸಲಾಗಿದೆ.

ಬೆಳ್ಳಿ ಹಬ್ಬದ ಸಂಭ್ರಮದ ಬಗ್ಗೆ: ಕನ್ನಡ ಪುಸ್ತಕ ಪ್ರಾಧಿಕಾರದ ಬೆಳ್ಳಿ ಹಬ್ಬದ ವರ್ಷದಲ್ಲಿ, ನಾನು ಅಧ್ಯಕ್ಷೆಯಾಗಿದ್ದು ತುಂಬಾ ಸಂತೋಷ ತಂದಿದೆ. ಕರ್ನಾಟಕದ ಎಲ್ಲ ಪ್ರಕಾಶಕರನ್ನು ಒಗ್ಗೂಡಿಸಿ ಪ್ರಕಾಶಕರ ಪ್ರಥಮ ಸಮ್ಮೇಳನವನ್ನು ಆಯೋಜಿಸಲಾಗಿತ್ತು, ಮನೋಹರ ಗ್ರಂಥಮಾಲೆಯ ರಮಾಕಾಂತ ಜೋಶಿಯವರ ಅಧ್ಯಕ್ಷತೆಯಲ್ಲಿ ಅದು. ಜರುಗಿತು. ಇದೇ ಸಂದರ್ಭದಲ್ಲಿ ಪ್ರಕಾಶಕರ ಕೈಪಿಡಿ ಮತ್ತು ಹೆಜ್ಜೆ ಗುರುತು ಕೈಪಿಡಿಗಳನ್ನು ಬಿಡುಗಡೆ ಮಾಡಲಾಯಿತು.

ಕನ್ನಡ ಪುಸ್ತಕ ಪ್ರಾಧಿಕಾರ ಬೈಲಾ ಗೆ ಸರಕಾರದ ಅನುಮೋದನೆ ಪಡೆಯಲಾಯಿತು. ಪ್ರಕಾಶಕರಿಗೆ ಜಿಎಸ್‌ಟಿ ಬಗ್ಗೆ ವಿಚಾರ ಸಂಕಿರಣ, ಮುದ್ರಣ, ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

ಪ್ರಾಧಿಕಾರ ಹಮ್ಮಿಕೊಂಡಿರುವ ಇನ್ನಿತರ ಯೋಜನೆಗಳು: ದಾವಣಗೆರೆಯಲ್ಲಿ ಡಾ. ಎಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ದಲಿತ ಸಾಹಿತ್ಯ ಸಮ್ಮೇಳನವನ್ನು ನಡೆಸಲಾಯಿತು. ಗಡಿನಾಡಿನ ಶಾಲಾ ಕಾಲೇಜುಗಳಿಗೆ ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮ, ರಾಜ್ಯದ ಆರು ಕಡೆ ಪುಸ್ತಕ ಮೇಳವನ್ನು ಆಯೋಜಿಸಲಾಗಿದೆ. ವಿಶ್ವ ಪುಸ್ತಕ ದಿನಾಚರಣೆ ರಾಜ್ಯದ 18 ಕಡೆ ಕಾರ್ಯಕ್ರಮ. ದೇಸಿ ಜ್ಞಾನ ಪರಂಪರೆ ಕಮ್ಮಟ, ಪುಸ್ತಕೋದ್ಯಮದ ಬಗ್ಗೆ ಮೂರು ಬೃಹತ್ ಸಂಪುಟಗಳನ್ನು 19,20,21 ಶತಮಾನ ಪ್ರಕಟಿಸುವ ಯೋಜನೆ ಕೈಗೆತ್ತಿಕೊಂಡಿದ್ದೇವೆ.

ಹಿರಿಯ ಸಾಹಿತಿಗಳ ಸಮಗ್ರ ಸಾಹಿತ್ಯ ಸೇರಿದಂತೆ, ವಿವಿಧ ಪ್ರಕಾರ ಪುಸ್ತಕಗಳ ಮುದ್ರಣ. ಇ - ಬುಕ್ ''ಇಂದಿರಾ ಬಾಯಿ'' ಕನ್ನಡದ ಪ್ರಥಮ ಕಾದಂಬರಿ ಮುದ್ರಿಸಲಾಗಿದೆ. ದನಿ ಹೊತ್ತಿಗೆ, ಶ್ರಾವ್ಯ ಪುಸ್ತಕ ಪಂಪ ಭಾರತ, ಆದಿ ಪುರಾಣದ ಆಯ್ದ ಪ್ರಸಂಗಗಳು,ಮಾಸ್ತಿ, ನರಂಜನ, ಕಥೆಗಳು, ಬೀಚಿ ಅವರ ಹಾಸ್ಯ ಲೇಖನಗಳು,ಪ್ರಾಧಿಕಾರ ನಡೆದು ಬಂದ ಹಾದಿ ಕುರಿತು ಅಧ್ಯಕ್ಷರುಗಳ ಸಾಕ್ಷ್ಯ ಚಿತ್ರ, ಮನೆ ಮನೆಗೆ ಪುಸ್ತಕ, ಪುಸ್ತಕ ಜಾತ್ರೆ, ಪುಸ್ತಕ ಸೂಚಿ 2017 , ಪ್ರಾಧಿಕಾರ ಕುರಿತು ಸರ್ಟಿಫಿಕೇಟ್ ಮತ್ತು ಡಿಪ್ಲೊಮೊ ಕೋರ್ಸನ್ನು ವಿಶ್ವ ವಿದ್ಯಾಲಯಗಳಲ್ಲಿ ಆಯೋಜಿಸುವುದು, ಪುಸ್ತಕ ನೀತಿ ತರುವ ಬಗ್ಗೆ ಯೋಚನೆ, ಈ ವಿಷಯಕ್ಕೆ ಸಂಬಂಧ ಪಟ್ಟಹಾಗೆ ಸರ್ಕಾರವನ್ನು ಒತ್ತಾಯ ಮಾಡಲಾಗುವುದು. ಆಗ ಪ್ರಕಾಶಕರಿಂದ ಲೇಖಕರಿಗೆ ಯಾವುದೇ ರೀತಿಯ ಅನ್ಯಾಯವಾಗುವುದಿಲ್ಲ. ಪುಸ್ತಕೋದ್ಯಾನ ಆರಂಭಿಸ ಬೇಕೆಂಬ ಬಹು ದೊಡ್ಡ ಕನಸು ನನ್ನದು, ಈಗಾಗಲೇ ಇದ್ದಕ್ಕೆ ಮನವಿ ಸಲ್ಲಿಸಲಾಗಿದೆ.

ಬೆಹರಿನ್ನಲ್ಲಿ ಕನ್ನಡ ಪ್ರೀತಿ: ಕನ್ನಡ ಸಾಹಿತ್ಯ ಪರಿಷತ್ತು, ಹಂಪಿ ಕನ್ನಡ ವಿಶ್ವವಿದ್ಯಾಲಯ ಮತ್ತು ಬೆಹರಿನ್ ಕನ್ನಡ ಸಂಘ

ಜೊತೆಯಾಗಿ, ಬೆಹರಿನ್ನಲ್ಲಿ 2 ದಿನಗಳ ಕಾಲ ಕನ್ನಡ ಸಾಹಿತ್ಯ ಸಮ್ಮೇಳನ ತುಂಬ ಅರ್ಥಪೂರ್ಣ ಯಶಸ್ವಿಯಾಗಿ ನಡೆಯಿತು.

ಕನ್ನಡ ಭಾಷೆ ಗೆ ವಿಶ್ವ ಮನ್ನಣೆ ದೊರೆತದರ ಬಗ್ಗೆ ಗೋಷ್ಠಿ ಏರ್ಪಡಿಸಲಾಗಿತ್ತು.

ಹಿರಿಯ ಸಾಹಿತಿಗಳ ಜೊತೆ ಸಂವಾದ, ಕವಿ ಗೋಷ್ಠಿ, ಹಾಗೇ ಗಲ್ಫ್ ಕನ್ನಡಿಗರ ಸಾಧನೆ , ಸಮಸ್ಯೆಗಳನ್ನ ಆಲಿಸಲಾಯಿತು. ಅಲ್ಲಿನ ಕನ್ನಡ ಸಂಘದ ಪದಾಧಿಕಾರಿಗಳನು ನಮ್ಮನ್ನು ಆದರದಿಂದ ನೋಡಿಕೊಂಡರು.3 ನೇದಿನ ಬೆಹರಿನ್ನ ಪ್ರವಾಸಮಾಡಿದೆವು.

ಬೆಹರಿನ್ನಲ್ಲಿ ಜನಸಂಖ್ಯೆ 15 ಲಕ್ಷ , ಸುಮಾರು ಅರ್ಧದಷ್ಟು ಜನ ಭಾರತೀಯರು ಆದರೆ 25000 ರಷ್ಟು ಮಾತ್ರ ಕನ್ನಡಿಗರು ವಾಸವಾಗಿದ್ದಾರೆ.

1915 ಬೆಹರಿನ್ನಲ್ಲಿ, ಎಲ್ಲಾ ಭಾರತೀಯರು ಸೇರಿ ಇಂಡಿಯನ್ ಕ್ಲಬ್ ಮಾಡಿಕೊಂಡಿದ್ದಾರೆ.

ಒಂದು ಸಾಮ್ಯತೆ ಅಂದರೆ ಬೆಹರಿನ ಇಂಡಿಯನ್ ಕ್ಲಬ್ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಆರಂಭವಾದದ್ದು 1915 ರಲ್ಲೇ. ಕನ್ನಡ ಸಾಹಿತ್ಯ ಪರಿಷತ್ತಿನ 100 ವರ್ಷದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನವನ್ನ ಆಯೋಜಿಸಿತ್ತು.

ಅಲ್ಲಿನ ಎತ್ತರದ ಕಟ್ಟಡ ಫಿನಾನ್ಸ್ ಟವರ್ ಅದರ ವಿನ್ಯಾಸಕರು ಕನ್ನಡಿಗರು

ತುಂಬಾ ಇಂಜಿನಿಯರ್ಸ್ ಕನ್ನಡಿಗರು, ಅಲ್ಲಿನ ಕನ್ನಡ ಸಂಘ, ಬೆಹರಿನ್ ಕನ್ನಡ ಭವನವನ್ನು ಕಟ್ಟಲು ಮುಂದಾಗಿದೆ, ಅದಕ್ಕೆ ಅವರು ಕರ್ನಾಟಕ ಸರ್ಕಾರದ ಸಹಾಯವನ್ನು ಬಯಸುತ್ತಿದ್ದಾರೆ.

ಕನ್ನಡ ಕಲಿಸಬೇಕು ಎನ್ನುವುದು ಇಲ್ಲಿನ ಶಾಲೆಗಳಿಂದ ಸಾಧ್ಯವಾಗುತ್ತಲ್ಲ ಆದರೆ ಅಲ್ಲಿನ ಏಶಿಯನ್ ಶಾಲೆಯಲ್ಲಿ 8 ನೇ ತರಗತಿಯಿಂದ ಕನ್ನಡವನ್ನು ಕಲಿಸಲಾಗುತ್ತದೆ. ಪ್ರತಿ ಕನ್ನಡದ ಮಗು ಕನ್ನಡ ಕಲಿಯಲೇಬೇಕು ಇದಂತು ನಿಜಕ್ಕೂ ಹೆಮ್ಮೆಯ ಸಂಗತಿ.

ಇನ್ನು ಹೋಟೆಲ್ ಗೌರಿ ಕೃಷ್ಣ, ವನಿತ ಮೆನ್ಸ ಪಾರ್ಲರ್ ಕನ್ನಡ ಫಲಕ ನೋಡಿ ನಮಗಂತು ಸಂತೋಷವಾಯಿತು.

ಕರ್ನಾಟಕದಲ್ಲಿ ಕನ್ನಡ ಶಾಲೆ ಮುಚ್ಚುತ್ತಿರುವುದಕ್ಕೆ ಗಲ್ಫ್ ಕನ್ನಡಿಗರು ಕಳವಳ ವ್ಯಕ್ತ ಪಡಿಸಿದರು

ಶಾಲೆಗಳನ್ನು ಉಳಿಸಿಕೊಳ್ಳಲು ಸಹಕರಿಸುವುದಾಗಿ ಹೇಳಿದರು.

ಅಲ್ಲಿ ಕೆಲಸ ಮಾಡಲು ಇಂಗ್ಲೀಷ್ ಮುಖ್ಯವಲ್ಲ ಎಂದು ತಿಳಿದ ನಮಗೆ ಖುಷಿಕೊಟ್ಟಿತು.

ಒಟ್ಟಾರೆಯಾಗಿ ಬೆಹರಿನ್ ಸಾಹಿತ್ಯ ಸಮ್ಮೇಳನ ಖುಷಿ ನೀಡಿದೆ.

ಸಾಹುಕಾರರಿಗೆ ಇರುವ ಒಂದು ದೊಡ್ಡ ಸಮಸ್ಯೆ!

ಕ್ಷಣ ಹೊತ್ತು ಆಣಿ ಮುತ್ತು

ಎಸ್.ಷಡಕ್ಷರಿ

editoped@vishwavani.news

ಸಾಹುಕಾರರಿಗೆ ಸಮಸ್ಯೆಗಳು ಕಡಿಮೆ ಇರುತ್ತವೆ ಎಂದು ಎಲ್ಲರೂ ಭಾವಿಸುತ್ತಾರೆ ಅಲ್ಲವೇ? ಆದರೆ ಸಾಹುಕಾರರೊಬ್ಬರು ಯಾವಾಗಲೂ 'ಸಾಹುಕಾರರಾದವರಿಗೆ ತಮ್ಮ ನಂತರ ಸಾಹುಕಾರಿಕೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವ ಸಾಮರ್ಥ್ಯ ತಮ್ಮ ಮಕ್ಕಳಿಗಿದೆಯೇ ಎನ್ನುವುದೇ ಅವರ ದೊಡ್ಡ ಸಮಸ್ಯೆ' ಎಂದು ಹೇಳುತ್ತಿದ್ದರು. ಇದೇ ಮಾತಿಗೆ ಸೂಕ್ತ ಎನಿಸಬಹುದಾದ ಮಕ್ಕಳ ಕತೆಯೊಂದು ಇಲ್ಲಿದೆ.

ಒಂದೂರಿನಲ್ಲಿ ಒಬ್ಬ ಸಿರಿವಂತರಿದ್ದರಂತೆ. ಅವರಿಗೆ ಮೂರು ಜನ ಮಕ್ಕಳು. ತಮ್ಮ ನಂತರ ತಮ್ಮ ಸಿರಿವಂತಿಕೆಯನ್ನು ಉಳಿಸಿಕೊಳ್ಳಲು ಮೂವರಲ್ಲಿ ಯಾರು ಯೋಗ್ಯ ಎಂದು ಕಂಡುಕೊಳ್ಳಬೇಕಿತ್ತು. ಮೂವರು ಮಕ್ಕಳನ್ನು ಕರೆದು ತಲಾ ಒಂದು ನೂರು ರುಪಾಯಿ ಕೊಟ್ಟು, ಈ ಹಣದಲ್ಲಿ ನಿಮ್ಮ ನಿಮ್ಮ ಕೋಣೆಗಳನ್ನು ಸಂಪೂರ್ಣವಾಗಿ ತುಂಬಿಸುವಂಥದ್ದು ಏನನ್ನಾದರೂ ತೆಗೆದುಕೊಂಡು ಬನ್ನಿ ಎಂದರು.

ಮೊದಲನೆಯವನು ತನ್ನ ಗೆಳೆಯರಲ್ಲಿ ವಿಚಾರಿಸಿದ. ಕೋಣೆ ತುಂಬುವಂಥ ವಸ್ತು ನೂರು ರುಪಾಯಿಗೆ ಏನೂ ಸಿಗುವುದಿಲ್ಲ ಎಂದು ಎಲ್ಲರೂ ಹೇಳಿಬಿಟ್ಟರು. ಕೊನೆಗೊಬ್ಬ ಗೆಳೆಯನ ಸಲಹೆಯಂತೆ ಪುರಸಭೆಯವರಿಂದ ಒಂದು ಗಾಡಿ ಕಸವನ್ನು ಕೊಂಡು ತಂದು ತನ್ನ ಕೋಣೆಯಲ್ಲಿನ ದುರ್ವಾಸನೆಯಿಂದಾಗಿ ಸಿಟ್ಟುಗೊಂಡರು. ಸಾವಿರ ರೂಪಾಯಿ ಖರ್ಚು ಮಾಡಿ ಕಸವನ್ನೆಲ್ಲ ಹೊರಗೆ ಸಾಗಿಸಿ ಮನೆಯನ್ನು ಶುಭ್ರಗೊಳಿಸಿದರು. ಮಗನನ್ನು ಕರೆದು ಬೈಯ್ದರು. ಆತ 'ನೂರು ರುಪಾಯಿಗೆ ಕಸವಲ್ಲದೆ ಮತ್ತೇನು ಸಿಗುತ್ತದೆ?' ಎಂದು ಮರು ಪ್ರಶ್ನಿಸಿದ.

ಎರಡನೆಯ ಮಗ ಊರಲ್ಲೆಲ್ಲ ಸುತ್ತಾಡಿ ನೂರು ರೂಪಾಯಿಗೆ ಮೂರ್ನಾಲ್ಕು ಗಾಡಿಯಷ್ಟು ಹುಲ್ಲು ತಂದು ತುಂಬಿಸಿದ. ಸಂಜೆ ಮನೆಗೆ ಮರಳಿದ ಸಾಹುಕಾರರು ಕೋಣೆಯಲ್ಲೆಲ್ಲ ತುಂಬಿ ಹೋಗಿದ್ದ ಹುಲ್ಲು ಕಂಡು ಸಿಟ್ಟಿನಿಂದ ಹಲ್ಲು ಕಡಿದರು. ಹಣ ಖರ್ಚುಮಾಡಿ ಹುಲ್ಲನ್ನು ಹೊರಗೆ ಹಾಕಿದರು. ಮಗನನ್ನು ಬೈಯ್ದಾಗ ಆತನೂ 'ನೂರು ರುಪಾಯಿಯಷ್ಟು ಕಡಿಮೆ ಹಣಕ್ಕೆ ಹುಲ್ಲಲ್ಲದೆ ಕೋಣೆ ತುಂಬುವಷ್ಟು ಮತ್ತೇನು ಸಿಗುತ್ತದೆ? ಎಂದು ಪ್ರಶ್ನಿಸಿದ. ಮೂರನೆಯ ಮಗನ ಸರದಿ, ಆತ ಒಂದು ರೂಪಾಯಿ ಕೊಟ್ಟು ಧೂಪದ ಬತ್ತಿ ತಂದ. ಅದನ್ನು ಹೊತ್ತಿಸಿಟ್ಟ. ತಂದೆ ಬಂದಾಗ ಕೋಣೆಯಷ್ಟೆ ಅಲ್ಲ, ಮನೆಯಲ್ಲೆಲ್ಲ ಸುವಾಸನೆ ತುಂಬಿ ತುಳುಕುತ್ತಿತ್ತು. ತಂದೆಯ ಮನಸ್ಸು ಪ್ರಫುಲ್ಲವಾಯಿತು.



ಮೂರನೆಯ ಮಗ 'ಅಪ್ಪಾ! ಕೋಣೆಯನ್ನು ತುಂಬಿಸಲು ಒಂದು ರೂಪಾಯಿಯ ಧೂಪದ ಕಡ್ಡಿ ಸಾಕಾಯಿತು. ಮಿಕ್ಕಿರುವ ತೊಂಬತ್ತೊಂಬತ್ತು ರೂಪಾಯಿಗಳನ್ನು ನಿಮಗೇ ಹಿಂತಿರುಗಿಸುತ್ತಿದ್ದೇನೆ' ಎಂದ. ಸಾಹುಕಾರರು ಯಾರನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿದರು ಎಂಬುದು ನಿಮಗೀಗಾಗಲೇ ಗೊತ್ತಾಗಿರಬಹುದು! ನಿಮ್ಮ ಊಹೆ ಸರಿ! ಸಿರಿವಂತರು ಮೂರನೆಯ ಮಗನನ್ನೇ ಉತ್ತರಾಧಿಕಾರಿಯಾಗಿ ನೇಮಿಸಿದರು. ನಮಗೆಲ್ಲ ಅಪರಿಮಿತ ಶಕ್ತಿ ಸಾಮರ್ಥ್ಯಗಳು ಸಿಕ್ಕಿವೆ. ನಮಗೆ ಸಿಕ್ಕಿದ್ದು ಇಷ್ಟೇನಾ ಎಂದು ಕೊರಗುತ್ತ ಕೂರಬಹುದು. ಅದನ್ನುಪಯೋಗಿಸಿ ನಮ್ಮ ಪ್ರಪಂಚದಲ್ಲಿ ಕಸ ತುಂಬಿಸಬಹುದು. ಎಲ್ಲರೂ ಬೇಸರಿಸಿಕೊಳ್ಳುವಂತೆ ಮಾಡಬಹುದು. ಅಥವಾ ಹುಲ್ಲು ತುಂಬಿಸಿ ಯಾರಿಗೂ ಉಪಯೋಗವಿಲ್ಲದಂತೆ ಬಾಳಬಹುದು ಅಥವಾ ನಾವಿರುವ ಪರಿಸರವನ್ನು ಸುವಾಸನಾಯುಕ್ತವಾಗಿ ಮಾಡಿ ನಾವೂ ಮತ್ತು ನಮ್ಮೊಂದಿಗೆ ಎಲ್ಲರೂ ಆನಂದದಿಂದ ಬದುಕುವಂತೆ ಮಾಡಬಹುದು. ಅಂತಹ ಧೂಪದ ಬತ್ತಿ ಯಾವುದು ಗೊತ್ತೇ? ನಗುನಗುತ್ತಾ ಇರುವುದು ಒಳ್ಳೆಯ ಮಾತುಗಳನ್ನಾಡುವುದು, ಎಲ್ಲರಿಗೂ ಶುಭವನ್ನೇ ಹಾರೈಸುವುದು, ಸಾಧ್ಯವಿದ್ದರೆ ಮತ್ತೊಬ್ಬರಿಗೆ ಸಹಾಯ ಮಾಡುವುದು ಮುಂತಾದವು. ಏನೂ ಖರ್ಚಿಲ್ಲದೆ ನಮ್ಮ ಬದುಕನ್ನು ತುಂಬಿಸಿಕೊಳ್ಳುವ, ಪರಿಸರವನ್ನು ಶುದ್ಧಿಯಾಗಿಟ್ಟುಕೊಳ್ಳುವ ವಿಧಾನಗಳು. ಹಾಗೆ ಮಾಡಿದಾಗ ನಾವು ಬದುಕಿನ ಸಿರಿವಂತಿಕೆಗೆ ಅರ್ಹ ಉತ್ತರಾಧಿಕಾರಿಗಳಾಗುತ್ತೇವೆ. ಅಲ್ಲವೇ?

ಮೇಲಿನ ಕತೆಯಲ್ಲಿ ಉತ್ಪ್ರೇಕ್ಷೆ ಇರಬಹುದೇ? ಆದರೆ ಅದರ ತತ್ವದಲ್ಲಿ ಸತ್ವ ಇದೆಯಲ್ಲವೇ?